# ಪಾನ್ ಸಂಖ್ಯೆಗೆ ಆಧಾರ್ ನೀವೇ ಜೋಡಿಸಿ

■ ಶಶಿಕುಮಾರ್ ಸಿ.




'ಪಾನ್ ಸಂಖ್ಯೆಗೆ ಆಧಾರ್ ಸಂಖ್ಯೆ ಜೋಡಣೆ' ಪ್ರಕ್ರಿಯೆಗೆ ಕೇಂದ್ರ ಸರ್ಕಾರದ ಆದಾಯ ತೆರಿಗೆ ಇಲಾಖೆಯು ಮಾರ್ಚ್ 31ಕ್ಕೆ ಅಂತಿಮ ಗಡುವು ನೀಡಿತ್ತು. ಆದರೆ, ಕೊರೊನಾ ಸೋಂಕಿನ ಅಲೆಯ ಹಿನ್ನೆಲೆಯಲ್ಲಿ ಇಲಾಖೆಯು ಈ ಗಡುವನ್ನು ಜೂನ್ 30ಕ್ಕೆ ವಿಸ್ತರಿಸಿದೆ. ಇದರಿಂದ ಆಧಾರ್ ಜೋಡಣೆ ಮಾಡದವರು ಇನ್ನಷ್ಟು ಸಮಯ ಸಿಕ್ಕಿರುವುದರಿಂದ ತುಸು ನಿರಾಳವಾಗಿದ್ದಾರೆ.

### ಜೋಡಣೆ ಅಗತ್ಯವೇ?

ಹಣಕಾಸು ಸಂಸ್ಥೆಗಳಲ್ಲಿ ಹೆಚ್ಚು ಮೊತ್ತದ ವಹಿವಾಟು ನಡೆಸುವಾಗ ತೆರಿಗೆ ವಂಚಿಸಲೆಂದು ಒಬ್ಬ ವ್ಯಕ್ತಿ ಹಲವು ಪಾನ್ ನಂಬರ್‌ಗಳನ್ನು ನಮೂದಿಸಿ ಆದಾಯ ತೆರಿಗೆ ಕಟ್ಟದೇ ವಂಚಿಸುತ್ತಿರುವ ಪ್ರಕರಣಗಳು ಬೆಳಕಿಗೆ ಬಂದಿವೆ. ಆರ್ಥಿಕವಾಗಿ ಅನುಕೂಲ ಹೊಂದಿರುವವರೂ ಬಡವರಿಗಾಗಿ ಇರುವ ಕಲ್ಯಾಣ ಯೋಜನೆಗಳನ್ನೂ ಪಡೆದುಕೊಳ್ಳುತ್ತಿದ್ದಾರೆ. 'ಪಾನ್ ಸಂಖ್ಯೆಗೆ ಆಧಾರ್ ಜೋಡಣೆ'ಯಿಂದ (ಲಿಂಕ್) ಇಂತಹ ಪ್ರಕರಣಗಳಿಗೆ ಕಡಿವಾಣ ಹಾಕಬಹುದು.

ಈಗಾಗಲೇ ಬ್ಯಾಂಕ್ ಖಾತೆಗಳಿಗೆ ಪಾನ್ ಸಂಖ್ಯೆ ಜೋಡಣೆ ಕಡ್ಡಾಯಗೊಳಿಸಲಾಗಿದ್ದು, ಆ ಕಾರ್ಯ ಯಶಸ್ವಿಯಾಗಿದೆ. ಇದರ ಜೊತೆಗೆ ಪಾನ್ ಸಂಖ್ಯೆಗೆ ಆಧಾರ್ ಸಂಖ್ಯೆಯನ್ನೂ ಜೋಡಿಸುವುದರಿಂದ ಹಣಕಾಸು ವಹಿವಾಟಿನ ಮೇಲೆ ನಿಗಾ ಇರಿಸಲು ಇನ್ನಷ್ಟು ಅನುಕೂಲವಾಗುತ್ತದೆ ಎಂಬ ಕಾರಣಕ್ಕೆ ಆದಾಯ ತೆರಿಗೆ ಇಲಾಖೆಯು ಈ ಆದೇಶವನ್ನು ಹೊರಡಿಸಿತ್ತು.

ಒಬ್ಬನೇ ವ್ಯಕ್ತಿ ಹಲವು ಪಾನ್‌ಕಾರ್ಡ್‌ಗಳನ್ನು ಹೊಂದಿರುವ ನಿದರ್ಶನಗಳೂ ಇವೆ. ಪಾನ್ ಸಂಖ್ಯೆಯ ಜೊತೆಗೆ ಆಧಾರ್ ಸಂಖ್ಯೆಯನ್ನು ಜೋಡಿಸಿದರೆ ಇಂತಹ ಕ್ರಮಕ್ಕೆ ಕಡಿವಾಣ ಹಾಕಬಹುದು ಎಂಬುದು ಇಲಾಖೆಯ ನಿಲುವು. ಇದುವರೆಗೂ ಅಂದಾಜು 53 ಕೋಟಿ ಮಂದಿ ಪಾನ್‌ಕಾರ್ಡ್ ಹೊಂದಿದ್ದಾರೆ. ಆ ಪೈಕಿ 32.7 ಕೋಟಿ ಮಂದಿ ಮಾತ್ರ ತಮ್ಮ ಪಾನ್ ಸಂಖ್ಯೆಗೆ ಆಧಾರ್ ಸಂಖ್ಯೆಯನ್ನು ಲಿಂಕ್ ಮಾಡಿವೆ.

### ಲಿಂಕ್ ಮಾಡದಿದ್ದರೆ ದಂಡ ಗ್ಯಾರಂಟಿ

ಪಾನ್ ಸಂಖ್ಯೆಗೆ ಆಧಾರ್ ಸಂಖ್ಯೆಯನ್ನು ಜೋಡಿಸದಿದ್ದರೆ ಸೆಕ್ಷನ್ 234H (ಫೈನಾನ್ಸ್ ಬಿಲ್) ಪ್ರಕಾರ ₹ 1000 ದಂಡ ವಿಧಿಸಬಹುದಾಗಿದೆ. ಅಲ್ಲದೇ ನಿಷ್ಕ್ರಿಯ ಪಾನ್ ಕಾರ್ಡ್ ನಿಮ್ಮ ಬಳಿ ಇಟ್ಟುಕೊಂಡ ಕಾರಣಕ್ಕೆ ಪಡೆಯುವ ಶುಲ್ಕ ಇದಕ್ಕಿಂತ ಭಿನ್ನವಾಗಿರಲಿದೆ. ಜೂನ್ 30ರ ಒಳಗೆ ಜೋಡಣೆ ಮಾಡದವರ ಪಾನ್‌ಕಾರ್ಡ್ ನಿಷ್ಕ್ರಿಯಗೊಳ್ಳಲಿದೆ. ಅದಾದ ಬಳಿಕ ನೀವು ನಡೆಸುವ ಹಣಕಾಸಿನ ವ್ಯವಹಾರಕ್ಕೆ ಶೇಕಡ 20ರಷ್ಟು ತೆರಿಗೆಯೂ ಬೀಳಲಿದೆ.

### ಆನ್‌ಲೈನ್‌ನಲ್ಲಿ ನೀವೇ ಲಿಂಕ್ ಮಾಡಿ!

ಪ್ಯಾನ್ ಸಂಖ್ಯೆಯ ಜೊತೆಗೆ ಆಧಾರ್ ಸಂಖ್ಯೆಯನ್ನು ಲಿಂಕ್ ಮಾಡಲು ಸಾರ್ವಜನಿಕರು ಇಮಿತ್ರ ಅಥವಾ ಯಾವುದಾದರೊಂದು ಆನ್‌ಲೈನ್ ಸೇವೆಗಳ ಅಂಗಡಿಗೆ ಹೋಗಬೇಕಾದ ಅವಶ್ಯಕತೆ ಇಲ್ಲ. ಆ ಕೆಲಸವನ್ನು ಸಾರ್ವಜನಿಕರೇ ಮಾಡಿಕೊಳ್ಳಬಹುದು. ಅದಕ್ಕಾಗಿ ಆದಾಯ ತೆರಿಗೆ ಇಲಾಖೆಯ ಅಧಿಕೃತ ವೆಬ್‌ಸೈಟ್ ಆದ incometaxindiaefiling.gov.inಗೆ ಭೇಟಿ ನೀಡಬಹುದು.

- ವೆಬ್‌ಸೈಟ್‌ಗೆ ಭೇಟಿ ಕೊಟ್ಟು ಅಗತ್ಯ ಮಾಹಿತಿ ಪೂರೈಸಿ ಮೊದಲು ಲಾಗಿನ್ ಆಗಬೇಕು.
- ಲಾಗಿನ್ ಆದ ಬಳಿಕ ಪ್ರೊಫೈಲ್ ಸೆಟ್ಟಿಂಗ್ಸ್ ಆಯ್ಕೆಯನ್ನು ಕ್ಲಿಕ್ಕಿಸಿದರೆ ಲಿಂಕ್ ಆಧಾರ್ ಆಯ್ಕೆ ಕಾಣುತ್ತದೆ. ಅದನ್ನು ಕ್ಲಿಕ್ಕಿಸಬೇಕು.
- ಬಳಿಕ ಹೆಸರು, ಹುಟ್ಟಿದ ದಿನಾಂಕ, ಲಿಂಗ ಸೇರಿದಂತೆ ಇನ್ನಿತರ ಮಾಹಿತಿಯನ್ನು ವೆಬ್‌ಸೈಟ್‌ನಲ್ಲಿ ಕೇಳಲಾಗುತ್ತದೆ. ಅದನ್ನು ಸರಿಯಾಗಿ ನಮೂದಿಸಬೇಕು.
- ಆಧಾರ್ ಕಾರ್ಡಿನಲ್ಲಿ ಹುಟ್ಟಿದ ವರ್ಷದ ಬಗ್ಗೆ ಮಾತ್ರ ಮಾಹಿತಿ ಇದ್ದರೆ 'ಐ ಹ್ಯಾವ್ ಒನ್ಲಿ ಇಯರ್ ಆಫ್ ಬರ್ತ್ ಇನ್ ಆಧಾರ್ ಕಾರ್ಡ್' ಅನ್ನುವ ಆಯ್ಕೆಯನ್ನು ಕ್ಲಿಕ್ಕಿಸಬೇಕು. ಹುಟ್ಟಿದ ದಿನಾಂಕ, ತಿಂಗಳಿನ ಮಾಹಿತಿಯೂ ಇದ್ದರೆ ಈ ಆಯ್ಕೆಯನ್ನು ಕ್ಲಿಕ್ಕಿಸುವ ಅಗತ್ಯತೆ ಇಲ್ಲ.
- ಇದಾದ ಬಳಿಕ 'ಐ ಅಗ್ರಿ ಟು ವ್ಯಾಲಿಡೇಟ್ ಮೈ ಆಧಾರ್ ಡಿಟೈಲ್ಸ್ ವಿಥ್ ಯುಐಡಿಎಐ' ಅನ್ನುವ ಆಯ್ಕೆಯನ್ನು ಕ್ಲಿಕ್ಕಿಸಿ ನಂತರ ಲಿಂಕ್ ಆಧಾರ್ ಅನ್ನುವುದನ್ನ ಒತ್ತಬೇಕು. ಇಷ್ಟಾದರೆ ನಿಮ್ಮ ಪ್ರಕ್ರಿಯೆ ಪೂರ್ಣವಾಗುತ್ತದೆ.
- ಪಾನ್ ಸಂಖ್ಯೆಯ ಜೊತೆಗೆ ಆಧಾರ್ ಸಂಖ್ಯೆಯ ಜೋಡಣೆ ಪ್ರಕ್ರಿಯೆ ಯಶಸ್ವಿಯಾಗಿದೆಯೇ ಎಂಬುದನ್ನು ತಿಳಿಯಲು ಪ್ರೊಫೈಲ್ ಸೆಟ್ಟಿಂಗ್ಸ್‌ಗೆ ಹೋಗಿ 'ಲಿಂಕ್ ಆಧಾರ್' ಅನ್ನುವ ಆಯ್ಕೆಯನ್ನು ಕ್ಲಿಕ್ಕಿಸಿದರೆ ಮಾಹಿತಿ ಲಭ್ಯವಾಗುತ್ತದೆ.

ಒಂದು ವೇಳೆ ನೀವು ನಿಮ್ಮ ಪ್ಯಾನ್ ಸಂಖ್ಯೆಗೆ ಆಧಾರ್ ಸಂಖ್ಯೆಯನ್ನು ಎಸ್‌ಎಂಎಸ್ (SMS) ಕಳುಹಿಸುವ ಮೂಲಕ ಲಿಂಕ್ ಮಾಡಲು ಬಯಸಿದರೆ, ನೀವು ನಿಮ್ಮ ಅಧಿಕೃತ ಮೊಬೈಲ್ ಸಂಖ್ಯೆಯಿಂದ UIDPAN <12digit Aadhaar> <10digit PAN> ಎಂದು ಟೈಪ್ ಮಾಡಿ 567678 ಅಥವಾ 561561 ಸಂಖ್ಯೆಗೆ ಕಳುಹಿಸಬೇಕು. ಬಳಿಕ ನಿಮ್ಮ ಲಿಂಕ್ ಆಗಿರುವ ಸೂಚನೆ ನಿಮಗೆ ಲಭ್ಯವಾಗುತ್ತದೆ. ■